'ಲೆಕ್ಕದ ಮಾಸ್ತರರು. ಅವರಲ್ಲಿ ನ್ಯಾಯ ಕೇಳಬೇಕಿತ್ತು.'

'ಏನು ನ್ಯಾಯ?'

'ನೀವ್ಯಾರು? ಅವರನ್ನು ಕರೀರಿ.'

ತನ್ನ ಪರಿಚಯ ಇಲ್ಲದವರು ಅನ್ನುವುದು ಖಾತ್ರಿಯಾಯಿತು ಮಾಸ್ತರರಿಗೆ.

'ರಾತ್ರಿ ಹೊತ್ತು ಹೀಗೆಲ್ಲ ಗದ್ದಲ ಎಬ್ಬಿಸಿದರೆ ಪೊಲೀಸು ಕರೆಯುತ್ತೇನೆ.'

'ಪೊಲೀಸು ಬೇಡ... ಮಾಸ್ತರರನ್ನು ಕರೆಯಿರಿ.'

'ಅವರೆಲ್ಲೋ ಹೊರಗೆ ಹೋಗಿದ್ದಾರೆ, ನಾಳೆ ಬೆಳಗ್ಗೆ ಬರುತ್ತಾರೆ.'

ಈ ಮಾತು ಕೇಳುತ್ತಲೇ ಬಂದಿದ್ದ ತಂಡ ತಣ್ಣಗಾಯಿತು.

'ಇವತ್ತು ಅವರಿಲ್ಲವಾದರೇನು, ನಾಳೆ ಬರುವಾ... ನಾಳೆ ಕೇಳುವಾ... ಕೇಳದೆ ಬಿಡಬಾರದು... ದಲಿತರಿಗೆ ಬಯ್ಯಬಾರದು ಅಂತ ಕಾನೂನಿದೆ' ಅನ್ನುತ್ತ ಅವರು ಹೊರಟು ಹೋದರು.

ಹತ್ತು ನಿಮಿಷ ಕಳೆಯಿತು. ಬಂದವರು ಕಾಣದಷ್ಟು ದೂರ ಹೊರಟುಹೋಗಿದ್ದರು. 'ಏನು ಮಾಡಲಿ ನಾನು. ಈ ರಾತ್ರಿ ಹೊತ್ತು ಇಂತವರೇ ಇರುವ ದಲಿತ ಕೇರಿ ಸಂದರ್ಶನ ನನ್ನ ಹಣೆಯಲ್ಲಿ ಬರೆದಿದ್ದರೆ ಯಾರು ಏನು ಮಾಡಲಿಕ್ಕಾಗುತ್ತೆ?' ಎನ್ನುತ್ತ ಶಪಿಸಿ ಚಪ್ಪಲಿ ಹಾಕಿಕೊಳ್ಳುತ್ತ, 'ಹೂಂ ಹೊರಡು' ಎಂದರು ಮಾಸ್ತರರು.

'ತಾಳಿ, ಚಿತ್ರಾನ್ನ ಸ್ವಲ್ಪ ಉಳಿದಿದೆ' ಅಂದ ಮಾಸ್ತರರ ಹೆಂಡತಿ, 'ತಿನ್ನುತ್ತೀಯೇನೋ...' ಎಂದು ಕೇಳಿ ಅವನ ಉತ್ತರಕ್ಕೂ ಕಾಯದೆ ಪ್ಲೇಟು ಹುಡುಗನ ಕೈಯಲ್ಲಿ ತಂದಿತ್ತರು.

'ಸರಿ, ಬೇಗ ತಿನ್ನು' ಅನ್ನುತ್ತ ಮಾಸ್ತರರು ಅಲ್ಲೇ ನಿಂತರು.

ಲಗುಬಗೆಯಿಂದ ಚಿತ್ರಾನ್ನ ತಿಂದು ಮುಗಿಸಿದ ಹುಡುಗ ತಟ್ಟೆ ತೊಳೆದು ತಂದಿಟ್ಟ. 'ಸರಿ ಬಾ...' ಹೊರಟರು ಮಾಸ್ತರರು. ಅಷ್ಟರಲ್ಲಿ ಗೇಟಿನೆದುರಲ್ಲಿ ಅಪ್ಪ ಬಂದು ನಿಂತಿದ್ದ. ಹುಡುಗನ ಮುಖದಲ್ಲಿ ಮಂದಹಾಸ ಅರಳಿತು. ಅಪ್ಪ ಗೇಟು ತೆರೆದು ಒಳಗೆ ಬಂದು ವಿಧೇಯನಾಗಿ ನಿಂತಿದ್ದ.

'ಅಪ್ಪ, ನಿನ್ನ ಗೆಳೆಯರು ಇಲ್ಲಿ ಬಂದು ಗಲಾಟೆ ಮಾಡಿದರು' ಹುಡುಗ ವರದಿ ಒಪ್ಪಿಸಿದ.

'ನಾನು ನಿನಗೆ ನಾಲ್ಕು ಬುದ್ಧಿಮಾತು ಹೇಳಿದ್ದನ್ನು ಕೇಳಿಸಿಕೊಂಡಿದ್ದಾರೆ. ನಿನ್ನೆಯಿಂದ ನನ್ನನ್ನು ಹುಡುಕುತ್ತಿದ್ದಾರೆ. ನಾನಿದಕ್ಕೆಲ್ಲ ಹೆದರುವವನಲ್ಲ' ಮಾಸ್ತರರು ದನಿಯೆತ್ತರಿಸಿ ನುಡಿದರು.

'ಅವರೇನೂ ಮಾಡುವುದಿಲ್ಲ, ಸುಮ್ಮನಿರಲು ಅವರಿಗೆ ನಾನು ಹೇಳ್ತೇನೆ' ಅಪ್ಪ ನುಡಿದ.

ಮಾಸ್ತರರು 'ಇವತ್ತಾದ್ರೂ ಸಮಯಕ್ಕೆ ಸರಿಯಾಗಿ ಬಂದೆಯಲ್ಲ... ಹೀಗೆ ನಮ್ಮ ನಮ್ಮ ಹೊಣೆಗಾರಿಕೆ ಅರಿತು ನಾವುಗಳು ವ್ಯವಹರಿಸಿದರೆ ಎಷ್ಟು ಸುಲಭದಲ್ಲಿ ಸಮಸ್ಯೆಗಳು ಪರಿಹಾರಗೊಳ್ಳುತ್ತವೆ ಗೊತ್ತುಂಟಾ?' ಅಂದರು.

ಅಪ್ಪ ಮರುಮಾತಾಡದೆ ಸಪ್ಪೆ ನಗೆ ನಕ್ಕು, 'ಬಾ ಬಾ ಹೋಗೋಣ' ಎಂದ. ಮಾಸ್ತರರ ಬಾಯಿಯಿಂದ ಇನ್ನೂ ಬರಬಹುದಾದ ಬೈಗಳನ್ನು ಕೇಳುವ ಶಕ್ತಿ ಅವನಲ್ಲಿ ಉಳಿದಿರಲಿಲ್ಲ.

ಇಬ್ಬರೂ ಮನೆಯ ಗೇಟು ದಾಟುತ್ತಿದ್ದಂತೆ, 'ಇನ್ನೊಂದಾರು ತಿಂಗಳು ಇವತ್ತಿನ ಹಾಗೆ ಸಂಯಮ ವಹಿಸಿ ಅವನಿಗೆ ಕಲಿಯಲು ಅನುಕೂಲತೆ ಮಾಡಿಕೊಟ್ಟರೆ ಎಸ್ಸೆಸ್ಸೆಲ್ಸಿ ಪಾಸು ಮಾಡುತ್ತಾನೆ. ಮುಂದೆ ಕಲಿಯುವುದಾದರೆ ಮೀಸಲಾತಿಯಲ್ಲಿ ಸುಲಭವಾಗಿ ಕಾಲೇಜು ಸೀಟು ಸಿಗುತ್ತೆ. ಸ್ಕಾಲರ್ ಶಿಪ್ ಸಿಗುತ್ತೆ. ಅವನ ದಾರಿ ಅವನು ನೋಡಿಕೊಳ್ಳುತ್ತಾನೆ. ಉದ್ಯೋಗ ಬೇಕಿದ್ದರೆ ಅದೂ ಸಿಗುತ್ತೆ' ಎಂದು ಗಟ್ಟಿಯಾಗಿ ಹೇಳಿ, 'ಮತ್ತೆ ನೀನು ಗೆಳೆಯರೊಟ್ಟಿಗೆ ಸೇರಿ ಕುಡಿದು ಹಾಳಾಗಿ ಹೋಗು, ಅವನಿಗೇನೂ ತೊಂದರೆಯಿಲ್ಲ' ಎಂದು ತಮಗಷ್ಟೇ ಕೇಳುವ ಹಾಗೆ ಹೇಳಿ ಗೇಟು ಹಾಕಿದರು